

# ಪರ್ಸ್ ಮಾಯಾಂಗನೆ

■ ಡಾ. ಕೆ.ಬಿ. ರಂಗಸ್ವಾಮಿ

ಮೂರು ವರ್ಷಗಳ ಹಿಂದೆ 'ನಾವಿಕ' ಕಾರ್ಯಕ್ರಮದಲ್ಲಿ ಭಾಗವಹಿಸಲು ಅಮೆರಿಕಕ್ಕೆ ಹೋಗಿದ್ದಾಗ, ನ್ಯೂ ಹ್ಯಾಂಪ್‌ಶೈರ್‌ನಲ್ಲಿ ನೆಲೆಸಿರುವ ಗೆಳೆಯ ಶಶಿ ತನ್ನ ನೆನಪಿಗಾಗಿ ಕೊಡಿಸಿದ್ದ ಪುಟ್ಟ ಪರ್ಸನ್ನು ನನ್ನ ಅಜಾಗರೂಕತೆಯಿಂದಾಗಿ ಇತ್ತೀಚೆಗೆ ಎಲ್ಲೋ ಕಳೆದುಕೊಂಡುಬಿಟ್ಟೆ. ಶರ್ಟು ಜೇಬಿನಲ್ಲೂ ಸಲೀಸಾಗಿ ತೂರಿಸಿಕೊಳ್ಳಬಹುದಾಗಿದ್ದ ಪುಟ್ಟ ಪರ್ಸನ್ನು ಇಷ್ಟು ದಿನಗಳ ಕಾಲ ಜತನದಿಂದ ಕಾಪಾಡಿಕೊಂಡಿದ್ದೆ. ಒಂದೆರಡು ಬಾರಿ ಅಲ್ಲಿ ಇಲ್ಲಿ ಬಿಟ್ಟಿದ್ದೆನಾದರೂ ಅದು ಹೇಗೋ ವಾಪಸ್ ಬಂದು ಕೈ ಸೇರುತ್ತಿತ್ತು.

ಆದರೆ ಕೆಲ ದಿನಗಳ ಹಿಂದೆ ಅದನ್ನು ಶಾಶ್ವತವಾಗಿ ಕಳೆದುಕೊಂಡಾಗ ತುಂಬಾ ಸಂಕಟವಾಗಿಬಿಟ್ಟಿತು. ಯಾವಾಗಲೂ ಇಟ್ಟುಕೊಂಡಿರುತ್ತಿದ್ದ ಪಾಸ್‌ಪೋರ್ಟ್ ಸೈಜಿನ ನನ್ನ ಫೋಟೊವೊಂದನ್ನು ಬಿಟ್ಟರೆ, ಅದರಲ್ಲಿ ಹೇಳಿಕೊಳ್ಳುವಂಥ ಮೊತ್ತವೇನೂ ಇರಲಿಲ್ಲ. ಆದರೆ, ಶಶಿ ಕೊಡಿಸಿದ್ದ ಪರ್ಸು ಕಳೆದುಹೋಯಿತೆಂಬುದು ನನ್ನ ಸಂಕಟಕ್ಕೆ ಕಾರಣ.

ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಪರ್ಸಿಗೂ ನನಗೂ ಎಣ್ಣೆ ಸೀಗೆಕಾಯಿ ಸಂಬಂಧ. ಇರುವ ಒಂದೆರಡು ನೋಟುಗಳನ್ನೋ, ಚಿಲ್ಲರೆ ಪಲ್ಲರೆಯನ್ನೋ ತೂರಿಸಿಕೊಳ್ಳಲು ಶರ್ಟಿನ ಎದೆ ಭಾಗದಲ್ಲೊಂದು ಜೇಬು ಇರುವಾಗ ಹಣ ಕೊಟ್ಟು ಖರೀದಿಸುವ ಪರ್ಸು ಅತ್ಯಗತ್ಯ ವಸ್ತುವೆಂದು ಯಾವತ್ತಿಗೂ ನನಗನ್ನಿಸಿರಲೇ ಇಲ್ಲ. ಅದಕ್ಕೆ ಪೂರಕವೆಂಬಂತೆ ಆತ್ಮೀಯ ಗೆಳೆಯನೊಬ್ಬ, 'ಪರ್ಸು ನಮ್ಮಂಥವರಿಗಲ್ಲ ಕಣೋ. ಅದೇನಿದ್ದರೂ ಸ್ವಂತ ವಾಹನಗಳಲ್ಲಿ ಓಡಾಡುವ ಶ್ರೀಮಂತರಿಗೆ' ಎಂದ ಮಾತು ನನ್ನ ತಲೆಯಲ್ಲಿ ಕುಳಿತುಬಿಟ್ಟಿತ್ತು. ಹೌದಲ್ಲವೆ? ಬಿ.ಟಿ.ಎಸ್. ಬಸ್ಸಿನಲ್ಲಿ ಓಡಾಡುವ ನನ್ನಂಥವರು ಜೇಬಿನಲ್ಲಿ ಪರ್ಸ್ ಇಟ್ಟುಕೊಂಡು ತುಂಬಿ ತುಳುಕಾಡುವ ಆ ಬಸ್ಸಿನ ಕಂಬಿ ಹಿಡಿದು ನೇತಾಡುವಾಗ ಕಳ್ಳರಿಗೆ ಸರಾಗವಾಗಿ ಎತ್ತಿಕೊಳ್ಳಲು ಆಸ್ಪದ ಮಾಡಿಕೊಟ್ಟಂತಾಗುತ್ತದೆ. ಇರುವ ಅಲ್ಪಸ್ವಲ್ಪ ಕಾಸನ್ನು ಕಳೆದುಕೊಂಡು ಅಬ್ಬೇಪಾರಿಯಂತಾಗುವುದು ಏಕೆ? ಪರ್ಸಿನ ಉಸಾಬರಿಯೇ ಬೇಡ ಎಂದೆಲ್ಲಾ ಆಲೋಚಿಸಿ ಪರ್ಸು ಕೊಂಡುಕೊಳ್ಳಲು ನಾನು ಮನಸ್ಸು ಮಾಡಲೇ ಇಲ್ಲ.

ವಿದ್ಯಾಭ್ಯಾಸ ಮುಗಿದ ನಂತರ ಉದ್ಯೋಗಕ್ಕೆಂದು ದೂರದ ಕಲಬುರ್ಗಿಗೆ ಹೋದಾಗ ಮೊಟ್ಟಮೊದಲ ಬಾರಿಗೆ ಒಂದು ಪರ್ಸು ಖರೀದಿಸಿ ಜೇಬಲ್ಲಿಟ್ಟುಕೊಂಡು ಬೀಗಬೇಕೆಂಬ ಆಸೆ ಮೊಳೆತುಬಿಟ್ಟಿತು, ಮತ್ತದನ್ನು ಸಾಕಾರಗೊಳಿಸಿಯೂಬಿಟ್ಟೆ. ಅಷ್ಟೇನೂ ದುಬಾರಿಯಲ್ಲದ ಆ ಪರ್ಸು ನನ್ನ ಪ್ಯಾಂಟಿನ ಹಿಂಬದಿಯಲ್ಲಿದ್ದ ಜೇಬನ್ನು ಆಕ್ರಮಿಸಿಕೊಂಡುಬಿಟ್ಟಿತು. ಆದರೆ ಅದರಲ್ಲಿ ಇಡುತ್ತಿದ್ದುದು ತೀರಾ ನಗಣ್ಯವೆನಿಸುವ ಮೊತ್ತವೆಂತಲೇ ಹೇಳಬೇಕು. ಅಬ್ಬಬ್ಬಾ ಎಂದರೆ, ಒಂದರಿಂದ ಹತ್ತು ರೂಪಾಯಿಗಳವರೆಗಿನ ನೋಟುಗಳು ಮಾತ್ರ. ಹೆಚ್ಚಿನ ಹಣವೇನಾದರೂ ಇದ್ದರೆ, ಅದು ಶರ್ಟ್ ಜೇಬಿನಲ್ಲೋ ಪ್ಯಾಂಟಿನ ಒಳಜೇಬಿನಲ್ಲೋ ಕೂತಿರುತ್ತಿತ್ತು. ಹಣ ಬಿಟ್ಟರೆ ಪರ್ಸಿನಲ್ಲಿ ಸಾಮಾನ್ಯವಾಗಿ ಇರುತ್ತಿದ್ದುದು ಅವರಿವರು ಕೊಟ್ಟ ವಿಸಿಟಿಂಗ್ ಕಾರ್ಡುಗಳು. ನಾನಂತೂ ವಿಸಿಟಿಂಗ್ ಕಾರ್ಡ್ ಮಾಡಿಸಿಕೊಂಡು ಪರ್ಸಿನಲ್ಲಿಡುವಷ್ಟು ದೊಡ್ಡ ಮನುಷ್ಯನಾಗಿರಲಿಲ್ಲವಷ್ಟೆ!

ಅದೊಂದು ದಿನ ಯಾವುದೋ ಕಾರ್ಯನಿಮಿತ್ತ